ಮುಂದಿದ್ದ ಮಧುರಾ ನೋಡಿ ಮೆಲ್ಲಗೆ ನಗುತ್ತಿದ್ದವಳು ಥಟ್ಟಂತ ನಿಂತು, ಮೊಬೈಲ್‌ನಲ್ಲಿ ಮಾತನಾಡುತ್ತ ಸ್ವಲ್ಪ ಹಿಂದಾಗಿದ್ದ ನನ್ನತ್ತ ತಿರುಗಿ, ''ಈ ಮೊಬೈಲ್ ಏನರೇ ನಮ್ಮ ಕಾಲದಾಗ ಇದ್ದಿದ್ದರ ಆ ಸತ್ಯಭಾಮಾ ಹುಡುಗರನ್ನ ಹಿಡಿದು ಗಿರಿಗಿರಿ ತಿರಗಿಸಿಬಿಡತಿದ್ಲು ನೋಡು. ಮಸ್ತ ಆಟಾ ಆಡಸ್ತಿದ್ಲ'' ಅಂತ ನಕ್ಕಳು. ಒಮ್ಮಿಲೇ ಬಗ್ಗಿ ಸುಮಾರು ದೊಡ್ಡದೇ ಕಲ್ಲನ್ನೆತ್ತಿ ಶಾಂತವಾಗಿದ್ದ ಕೆರೆಗೆ ಎಸೆದೆ. ನೀರಿನಲ್ಲಿ ಅಲೆಗಳು ಉಂಗುರುಂಗುರವಾಗಿ ಎದ್ದೆದ್ದು ಇಳಿದವು. ನನ್ನ ಮನಸ್ಸು ಮಾತ್ರ ಅಲ್ಲೋಲಕಲ್ಲೋಲ.

ಇಪ್ಪತ್ತು ಇಪ್ಪತ್ತೆರಡು ವರ್ಷಗಳ ಹಿಂದಿನ ನೆನಪುಗಳನ್ನು ಕಪ್ಪುಪೆಟ್ಟಿಗೆಯಲ್ಲಿಟ್ಟು ಮುಚ್ಚಿ ಮೊಳೆ ಹೊಡೆದು ಹೂತುಹಾಕಿದ್ದೆ. ರಾತ್ರಿಯ ಕೊಳ್ಳಿದೆವ್ವಗಳಂತೆ ಮೆರವಣಿಗೆ ಹೊರಟು ಹೆದರಿಸುವ ಅವಕಾಶವೇ ಅವುಗಳಿಗೆ ದೊರಕಿರಲಿಲ್ಲ. ಬೆಳಗಿನಿಂದ ರಾತ್ರಿಯವರೆಗೆ ಮನೆಯ ಒಳಗೆ ಹೊರಗೆ ದುಡಿದು ದಣಿಯುವ ಮೈಯನ್ನು ಹಾಸಿಗೆಯ ಮೇಲೆ ಒಮ್ಮೆ ಚಾಚಿದರೆ ರಾತ್ರಿ ಎಚ್ಚರಾಗುವ ಮಾತೇ ಇಲ್ಲ. ಒಂದೆರಡು ಸಲ ಮಗ್ಗಲು ಬದಲಾಯಿಸಿದರೂ ನಿದ್ರೆಯ ಗುಂಗು ಹರಿಯುತ್ತಿರಲಿಲ್ಲ. ನಿದ್ರೆ ಬರಲಿಲ್ಲವೆಂಬ ತಕರಾರೇ ಇಲ್ಲವೆಂದ ಮೇಲೆ ಜಗವೆಲ್ಲ ಮಲಗಿರಲು ನಾನೊಬ್ಬಳೇ ಎದ್ದು ಕಣ್ಣು ಬಿಟ್ಟುಕೊಂಡು ಹಳೆಯದನ್ನೆಲ್ಲ ಕೆದಕಿ ಕೆದಕಿ ನಿಟ್ಟುಸಿರು ಬಿಡುವಷ್ಟು ಬಿಡುವನ್ನು ಹಗಲಾಗಲಿ, ಇರುಳಾಗಲಿ ನೀಡುವುದೇ ಇಲ್ಲ. ಅಂಥದ್ದರಲ್ಲಿ ಆ ಸತ್ಯಭಾಮೆಯ ನೆನಪು ಮಸುಕಾಗಿ ಹೋಗಿತ್ತು. ಇನ್ನು ಕೆಲವನ್ನು ನಾನು ಪ್ರಯತ್ನಪೂರ್ವಕವಾಗಿ ಮರೆತಿದ್ದೆ. ಇದೀಗ ಮಧುರಾ ಬೇಡದ ನೆನಪುಗಳನ್ನು ಅನಾಯಸವಾಗಿ ಕೆದಕಿದ್ದಳು.

''ಮೊಬೈಲ್ ಇಲ್ಲದ ಕೊರತೆ ಅವಳನ್ನೇನೂ ಕಾಡಿಲ್ಲ ಬಿಡು. ಎಷ್ಟು ಕಾಡಬೇಕಿತ್ತೋ ಅಷ್ಟೂ ಕಾಡಿ ಮುಗಿಸಿದ್ದಾಳೆ ಹುಡುಗರನ್ನು, ಮತ್ತೆ ಹುಡುಗಿಯರನ್ನೂ'' ನಾನು ಆಡಿದ ಮಾತುಗಳಲ್ಲಿ ಸ್ವಲ್ಪ ನಂಜಿತ್ತು. ರಾತ್ರಿಯ ಊಟ ಮುಗಿಸಿ ಮಧುರಾಳ ಮನೆಯ ಗೆಸ್ಟ್‌ರೂಮಿನಲ್ಲಿ ಅಡ್ಡಾದೆ. ಅವಳದಿನ್ನೂ ಅಡುಗೆಮನೆಯ ಕೆಲಸ ಮುಗಿದಿರಲಿಲ್ಲ. ಇಬ್ಬರಿಗೂ ಮಾತನಾಡುವುದು ಸಾಕಷ್ಟು ಬಾಕಿ ಇದ್ದುದರಿಂದ ಅವಳೂ ಗೆಸ್ಟ್‌ರೂಮಿಗೇ ಮಲಗಲು ಬರುವವಳಿದ್ದಳು. ಆದರೆ ನನಗೇಕೋ ಏಕಾಂತದಲ್ಲಿ ಒಂದಿಷ್ಟು ಬೇಡದ ನೆನಪುಗಳನ್ನು ಹೊರತೆಗೆಯಬೇಕಿತ್ತು, ಶಪಿಸಬೇಕಿತ್ತು.

ಬೆಳಗಾವಿಯಲ್ಲಿ ಬಿ.ಕಾಂ. ಮುಗಿಸಿ ಎಮ್.ಕಾಂ. ಮಾಡಲು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದಾಗ ನಾವು ಆಗಷ್ಟೇ ಹೊಸ್ತಿಲು ದಾಟಿ ಅಮ್ಮನ ಸೆರಗಿನಿಂದ, ಅಪ್ಪನ ಭದ್ರಕೋಟೆಯಿಂದ ಹೊರಬಿದ್ದವರಾಗಿದ್ದೆವು. ನೀರಿನಿಂದ ಹೊರಬಿದ್ದ ಮೀನುಗಳಂತೆ ಚಡಪಡಿಸುತ್ತಿದ್ದೆವು. ಕೆಲವರೇನೋ ಡಿಗ್ರಿ ಕೂಡಾ ಹಾಸ್ಟೆಲ್‌ನಲ್ಲಿದ್ದುಕೊಂಡೇ ಪೂರೈಸಿ ಪಿ.ಜಿ.ಗೆ ಬರುವಷ್ಟರಲ್ಲಿ ಎಂಥ ನೀರಿನಲ್ಲಾದರೂ ಸಲೀಸಾಗಿ ಈಜಬಲ್ಲೆ ಎನ್ನುವ ಗಟ್ಟಿಗಿತ್ತಿಯರಾಗಿದ್ದರು. ಆದರೆ, ಮೊದಲ ಸಲ ಹೊರಗೆ ಬಿದ್ದವರು ಹೊರಜಗತ್ತಿನ ಅದ್ಭುತಗಳಿಗೆ ಆಗಷ್ಟೇ ತೆರೆದುಕೊಂಡವರು. ಯಾರು ಹೇಗೋ ಏನೋ ಎನ್ನುವ ಅಳುಕು – ಲಂಗಬ್ಲೌಸ್, ಫುಲ್ ಮ್ಯಾಕ್ಸಿಯ ಸಿಂಪಲ್ ಹುಡುಗಿಯರಿಗೆ. ಚೂಡಿದಾರ ತೊಡುವವರೇ ಒಂದಷ್ಟು ಮಾಡರ್ನ್ ಎನಿಸಿದ್ದ ಕಾಲವದು.

ಅಪ್ಪ ಅಡ್ಮಿಶನ್ ಮಾಡಿಸಿ, ಯುನಿವರ್ಸಿಟಿ ಹಾಸ್ಟೆಲಿಗೆ ಸೇರಿಸಿದರು. ರೂಮಿನಲ್ಲಿ ನನಗೆ ಬೇಕಾಗುವ ಕೆಲವು ಸಾಮಾನುಗಳನ್ನು ಇಬ್ಬರೂ ಊರೊಳಗೆ ಹೋಗಿ ತಂದ ಮೇಲೆ ಅವನ್ನೆಲ್ಲ ರೂಮಿನಲ್ಲಿಟ್ಟು ಬಂದು ಅಪ್ಪನಿಗೆ ವಿದಾಯ ಹೇಳುವಾಗ ಕಣ್ಣೀರು ಹರಿದಿತ್ತು. ರೂಮ್‌ಮೇಟ್ ಆಗಿ ಬರುವವಳು ಹೇಗಿರುತ್ತಾಳೋ ಎನ್ನುವ ಆತಂಕ, ಮಧುರಾ ಬಂದು ಜೊತೆಯಾದಾಗ